# ಜಲಪೂಜೆ

ಜಲಪೂಜೆ ಅಥವಾ ಗಂಗಾಪೂಜೆ ಎನ್ನುವುದು ದ್ರಾವಿಡ ಸಂಸ್ಕೃತಿಯ ಮೂಲ ಆಚರಣೆ. ಸಾಮಾನ್ಯವಾಗಿ ಅಗ್ನಿ ಪೂಜೆಗೆ ಬದಲಾಗಿ 'ಗಂಗಾಪೂಜೆ'ಯನ್ನು ಕರ್ನಾಟಕದ ಕೆಳಸಮುದಾಯಗಳು ಆಚರಿಸುವುದು ರೂಢಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಕಾಡುಗೊಲ್ಲರ ಪುರಾಣವೊಂದು ಜಗತ್ತು ಹುಟ್ಟುವ ಮೊದಲೇ ಗಂಗೆ ಹುಟ್ಟಿದವಳೆಂದು ಹೇಳುವುದು ಗಮನಾರ್ಹವಾಗಿದೆ.

ಆರ್ಯೇತರ – ದ್ರಾವಿಡ ಸಮಾಜದಲ್ಲಿ ಮಾತೃಪ್ರಧಾನ ಪದ್ಧತಿಯು ಒಂದು ಪ್ರಕಾರವೆಂದು ಶಂಬಾ ಹೇಳುತ್ತಾರೆ. ಹೀಗಾಗಿ 'ಜಲಪೂಜೆ'ಯು ವೇದಪೂರ್ವಕಾಲದ ಸಂಪ್ರದಾಯವೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ದ್ರಾವಿಡ ಸಂಸ್ಕೃತಿಯ ಪರಂಪರೆಯುಳ್ಳ ಕೆಳಜಾತಿಗಳ ಸಾಂಸ್ಕೃತಿಕ ಆಚರಣೆಗಳನ್ನು ಹಿಂಬಾಲಿಸಿದರೆ, ಈ 'ಜಲಪೂಜೆ'ಯ ಆಚರಣೆಗಳು ಹೇರಳವಾಗಿ ದೊರೆಯುತ್ತವೆ. 'ನೀರು ಅಥವಾ ಗಂಗೆಯೇ ಪ್ರಧಾನವಾದ ಜೀವನಶೈಲಿ ಶಿವ ಪರಂಪರೆಯದಾಗಿದ್ದರೆ, ಅಗ್ನಿಯೇ ಪ್ರಧಾನವಾದ ಜೀವನವಿಧಾನ ವೈದಿಕ ಪರಂಪರೆಯದ್ದು' ಎಂದು ಲಕ್ಷ್ಮೀಪತಿ ಕೋಲಾರ ಅವರ ಸಂಶೋಧನೆ ಹೇಳುತ್ತದೆ. 'ವೈದಿಕರಲ್ಲಿ ಅಗ್ನಿಯನ್ನು ಶುದ್ಧಿಗಾಗಿ ಬಳಸಿದಂತೆ, ದ್ರಾವಿಡ ಮೂಲದ ತಳಸಮುದಾಯಗಳಲ್ಲಿ ಜಲವನ್ನು ಶುದ್ಧಿಗಾಗಿ ಬಳಸುವ ಸಂಪ್ರದಾಯ ಕರ್ನಾಟಕದಾದ್ಯಂತ ಇದೆ.

ಇನ್ನು ವೈದಿಕೇತರ ಸಮುದಾಯಗಳಲ್ಲಿ ಮದುವೆ ಕಾರ್ಯಗಳು ಆರಂಭವಾಗುವುದೇ 'ಗಂಗಾಪೂಜೆ'ಯಿಂದ. ಮಂಗಳವಾದ್ಯಗಳೊಂದಿಗೆ ಬಾವಿ ಅಥವಾ ಕೆರೆಗೆ ಹೋಗಿ ಗಂಗಮ್ಮನನ್ನು ಪೂಜಿಸಿ, ಮಣ್ಣಿನಕೊಡದಲ್ಲಿ ಅದೇ ನೀರನ್ನು ಹೊತ್ತು ತರುವುದರೊಂದಿಗೆ ಆರಂಭಗೊಳ್ಳುತ್ತವೆ. ತಮಿಳುನಾಡಿನಲ್ಲಿ ನದಿಗಳಿಗೆ ಸಂಬಂಧಿಸಿದ ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಇಲ್ಲಿನ ಚರಿತ್ರೆ, ಐತಿಹ್ಯ, ಹಾಡು ಮತ್ತು ಅವರ ಜೀವನ ನದಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ಕಾವೇರಿನದಿ ತಮಿಳುನಾಡಿನ ಪುರಾತನ ಸಂಸ್ಕೃತಿ ಹಾಗೂ ನಾಗರಿಕತೆಗಳ ಸಂಕೇತವೆನಿಸಿದೆ. ಕರ್ನಾಟಕದ ಕೊಡಗಿನ ತಲಕಾವೇರಿಯಲ್ಲೂ ಕಾವೇರಿ ನದಿಯನ್ನು ಪೂಜಿಸುವ ಆಚರಣೆ ಇದೆ. ಕರಾವಳಿ ತೀರದಲ್ಲಿ ಮೀನುಗಾರಿಕೆಯಿಂದಲೇ ಬದುಕು ಕಟ್ಟಿಕೊಂಡಿರುವ ಮೊಗವೀರ, ಖಾರ್ವಿ, ಗಂಗಾಮತಸ್ಥ ಮುಂತಾದ ಕೆಳಸಮುದಾಯಗಳಿಗೆ ಕಡಲು ಅವರ ಬದುಕಿನ ಅವಿಭಾಜ್ಯ ಅಂಗ. ಹೀಗಾಗಿ ಕಡಲು ಅವರ ದೈವ. ಮೀನುಗಳ ಸಂತಾನಾಭಿವೃದ್ಧಿ ಸಮಯದಲ್ಲಿ ಅವರು ಕಡಲಿಗೆ ಇಳಿಯುವುದಿಲ್ಲ. ಅವರು ಶ್ರಾವಣಮಾಸದ ಹುಣ್ಣಿಮೆಯಂದು ಸಾಮೂಹಿಕವಾಗಿ ಕಡಲಿಗೆ ಹಾಲು ಸುರಿದು ಪೂಜೆ ಸಲ್ಲಿಸುತ್ತಾರೆ.

ಬೆಂಗಳೂರಿನ ಕರಗ ಆಚರಣೆ ಮೂಲತಃ ನೀರು ತುಂಬಿದ ಹಸಿಮಣ್ಣಿನಿಂದ ಮಾಡಿದ ಕುಂಭದ ಪೂಜೆ. ಕೋಸಾಂಬಿ ಅವರು ಇದನ್ನು ಫಲಸಮೃದ್ಧಿಯ ಆಚರಣೆಯನ್ನಾಗಿಯೂ ವಿವರಿಸುತ್ತಾರೆ. ವಹ್ನಿಕುಲ ಕ್ಷತ್ರಿಯರು ಆಚರಿಸುವ 'ಕರಗ' ಉತ್ಸವ ಮೂಲತಃ ದ್ರಾವಿಡ ಸಂಪ್ರದಾಯದ್ದು. ಕರಗ ಆಚರಣೆಗೆ ಮೊದಲು ಸಮೀಪದ ಕೆರೆಗೆ ಹೋಗಿ ಗಂಗಮ್ಮನನ್ನು ಪೂಜಿಸಿ 'ಹಸಿಕರಗ'ವನ್ನು 'ಕೊಂಡ' ಹಾಯುವುದರ ಮೂಲಕ ತರುತ್ತಾರೆ. ನಂತರ ನಡೆಯುವುದು 'ಹೂವಿನ ಕರಗ'. ಹೂವಿನ ಕರಗ ಮುಗಿದ ತರುವಾಯ ಪರಸ್ಪರ ಓಕುಳಿ ನೀರಿನ ಎರಚಾಟದೊಂದಿಗೆ ಆಚರಣೆ ಮುಕ್ತಾಯವಾಗುತ್ತದೆ. ಈ ಉತ್ಸವದಲ್ಲಿ ಹೂವಿನ ಕರಗಕ್ಕಿಂತ, ಹಸಿಕರಗದ ಆಚರಣೆಯೇ ದ್ರಾವಿಡ ಮೂಲದ್ದು.

ಮ್ಯಾಸಬೇಡ ಸಮುದಾಯವೂ 'ಗಂಗಾಪೂಜೆ'ಗೆ ಆದ್ಯತೆ ಇದೆ. ಚಳ್ಳಕೆರೆ ಹಿರೇಹಳ್ಳಿಯ ದಡ್ಡಿಸೂರನಾಯಕನ ಜಾತ್ರೆಗೆ ಊರಿನ ನೂರಾರು ಹೆಣ್ಣುಮಕ್ಕಳು ಮಣ್ಣಿನ ಕುಂಭಗಳನ್ನು ಹೊತ್ತು 'ಹಳ್ಳಿಹಳ್ಳ'ಕ್ಕೆ ಹೋಗಿ 'ಕಾಶಿನೀರು' ತಂದ ನಂತರವೇ ಅವರ 'ಗುಗ್ರಿ' ಹಬ್ಬ ಶುರುವಾಗುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯಾಪಕವಾಗಿರುವ ಕಾಡುಗೊಲ್ಲ ಬುಡಕಟ್ಟಿನ ಧಾರ್ಮಿಕ ಆಚರಣೆಗಳು ಆರಂಭವಾಗುವುದೇ ಗಂಗೆ ಪೂಜೆಯಿಂದ. ಇದನ್ನು ಕಾಡುಗೊಲ್ಲರು 'ಹೊಳೆಪೂಜೆ' ಎಂದು ಕರೆಯುತ್ತಾರೆ. ಪಾವಗಡ ತಾಲ್ಲೂಕಿನಲ್ಲಿರುವ ಬೆಸ್ತರಹಳ್ಳಿಗೊಲ್ಲರಹಟ್ಟಿ ಕರ್ನಾಟಕದ ಅತ್ಯಂತ ಪುರಾತನ ಕಾಡುಗೊಲ್ಲರಹಟ್ಟಿಗಳಲ್ಲಿ ಒಂದು. ಇಲ್ಲಿರುವ ಬೊಮ್ಮದೇವರ ಗುಡಿಯಲ್ಲಿ ಕುಂಭಗಳನ್ನೇ (ನೀರು ತುಂಬಿದ ಮಣ್ಣಿನ ಕೊಡಗಳು) ದೇವರೆಂದು ಪೂಜಿಸುವ ಸಂಪ್ರದಾಯ ಇಂದಿಗೂ ಇದೆ. ಚಳ್ಳಕೆರೆಯ ಪರ್ಲಹಳ್ಳಿ ಕ್ಯಾತಪ್ಪನ ಪರಿಸೆ 'ಹೊಳೆಪೂಜೆ'ಯಿಂದ ಆರಂಭವಾಗುತ್ತದೆ. ವಸುಲುದಿಬ್ಬಕ್ಕೆ ದೇವರುಗಳು ಬಂದ ನಂತರ ಅಲ್ಲಿನ ಅಕ್ಕಗಳ ಬಾವಿಯಲ್ಲಿ ದೇವರಿಗೆ ಹೊಳೆಪೂಜೆ ನೆರವೇರಿಸಿದ ನಂತರ ಗುಡಿಯ ಕಳಸ ಕೀಳುತ್ತಾರೆ. ಹಿರಿಯೂರು ತಾಲ್ಲೂಕಿನ ಯರಬಳ್ಳಿಯ ದೊಡ್ಡಗೊಲ್ಲರಹಟ್ಟಿಯಲ್ಲಿ ನಡೆಯುವ 'ಕಾಳುಹಬ್ಬ' ಆರಂಭವಾಗುವುದೇ ಹೊಳೆಪೂಜೆಯೊಂದಿಗೆ. ಬಾಯಿಗೆ ಬಟಕಟ್ಟಿಕೊಂಡು (ಬಿಳಿ ವಸ್ತ್ರ) ಪೆಟ್ಟಿಗೆದೇವರು ಹಾಗೂ ತಮ್ಮ ಪೂರ್ವಿಕ ಈರಗಾರರ ಅಲುಗು ಈಟಿಗಳನ್ನು ಚಿಲುಮೆ ನೀರಲ್ಲಿ ಶುದ್ಧಿ ಮಾಡುತ್ತಾರೆ. ನಂತರ ದೇವರುಗಳಿಗೆ ದೀಪ ದೂಪಾರತಿ ಹಾಗೂ ಪಂಜಿನ ಸೇವೆ ಸಲ್ಲಿಸಿದ ನಂತರ 'ಕಾಳುಹಬ್ಬ' ಶುರುವಾಗುತ್ತದೆ.

ಕೋಲಾರ ಜಿಲ್ಲೆಯ ಕೆಲವೆಡೆ 'ಗಂಗ ಶಿರಸ್ಸಿನ ಆಚರಣೆ'ಯು ಮುಖ್ಯವಾಗಿದೆ. 'ಸೂರ್ಯ ಇನ್ನೇನು ಹುಟ್ಟುತ್ತಾನೆ ಎನ್ನುವ ಅಂತಿಮ ಕ್ಷಣದಲ್ಲಿ ಗಂಗೆಗೆ ಕಣ್ಣು ಬಿಡಿಸಲಾಗುತ್ತದೆ. ಕೂಡಲೇ ಗಂಗೆ ಶಿರಸ್ಸನ್ನು ಹೊರುವಾತನಿಗೆ ಮೈದುಂಬುತ್ತದೆ. ಒಟ್ಪೊಟ್ಟಿಗೇ ಗಂಗೆಯ ಶಿರಸ್ಸಿಗೆದುರಲ್ಲಿ ಕರ್ಪೂರ ಹಾಗೂ ಹುಲ್ಲಿನ ಗುಡ್ಡೆಗಳಿಗೆ ಬೆಂಕಿ ಹಚ್ಚಲಾಗುತ್ತದೆ. ಎದುರಿಗೆ ಪೂರ್ವದಲ್ಲಿ ಹುಟ್ಟುತ್ತಿರುವ ಸೂರ್ಯ ಹಾಗೂ ಹತ್ತಿ ಉರಿಯುತ್ತಿರುವ ನೆಲ್ಲುಹುಲ್ಲು ಮತ್ತು ಕರ್ಪೂರ; ಅವುಗಳನ್ನು ಕಾಣುತ್ತಿದ್ದಂತೆಯೇ ಗಂಗೆ ಮೈದುಂಬಿದಾತ ಗಂಗೆ ಶಿರಸ್ಸನ್ನು ತಲೆ ಮೇಲಿಡುವುದಕ್ಕೂ ಕಾಯದಂತೆ ಬೆಂಕಿಯನ್ನು ತುಳಿಯಲು ಮುನ್ನುಗ್ಗುತ್ತಾನೆ. ಈತನನ್ನು ಹತ್ತಾರು ಜನ ಹಿಡಿದು 'ಗಂಗೆ ಶಿರಸ್ಸನ್ನು' ತಲೆಯ ಮೇಲೆ ಹೊರಿಸುತ್ತಾರೆ. ನಂತರ ಗಂಗೆ ಶಿರೋಧಾರಿ ಬೆಂಕಿಯನ್ನು ರೊಚ್ಚಿನಿಂದ ತುಳಿಯುತ್ತಾ ಸಾಗುತ್ತಾನೆ' (ಲಕ್ಷ್ಮೀಪತಿ ಕೋಲಾರ).

ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಸಂಕ್ರಾಂತಿಯ ದಿನದಂದು ನಡೆಯುವ 'ದಿಗ್ಗಿ ಸಂಗಮೇಶ್ವರ' ಮತ್ತು 'ಭೀಮರಾಯನ ಗುಡಿ ಬಲಭೀಮೇಶ್ವರ' ಜಾತ್ರೆ 'ನೀರಿನ ಜಾತ್ರೆ' ಎಂದೇ ಪ್ರಸಿದ್ಧವಾಗಿದೆ. ದೇವರುಗಳನ್ನು ಸನ್ನತಿ ಸಮೀಪದ ಹೊಳೆಗೆ ಕರೆದುಕೊಂಡು ಹೋಗಿ ಪೂಜಿಸಿ, ಅಲ್ಲಿಂದ ತೊಗಲಿನ ತಿತಿಗಳಲ್ಲಿ (ಚೀಲ) ನೀರನ್ನು ಊರಿಗೆ ತರುತ್ತಾರೆ. ಅಂದು ಇಡೀ ಶಹಾಪುರ ನೀರಿನಲ್ಲಿ ಮಿಂದೇಳುತ್ತದೆ. ಇಂದಿಗೂ ಈ ಸಂಪ್ರದಾಯ ಆಚರಣೆಯಲ್ಲಿದೆ.

'ಜಲಪೂಜೆ' ಕೆಳಸಮುದಾಯಗಳ ಸಂಸ್ಕೃತಿಯಲ್ಲಿ ಅವರ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಯ ಅವಿಭಾಜ್ಯ ಅಂಗವಾಗಿದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಪ್ರತಿಯೊಂದು ಧರ್ಮವೂ ಈ ಜಗತ್ತಿಗೆ ಪ್ರೇಮ, ಬಂಧುತ್ವದ ಸಂದೇಶವನ್ನೇ ನೀಡಿದೆ.
  —ಖಾನ್ ಅಬ್ದುಲ್ ಗಫಾರ್‌ಖಾನ್
- ಮೂಡುವನು ರವಿ ಮೂಡುವನು ಕತ್ತಲೊಡನೆ ಜಗಳಾಡುವವನು.
  —ಪಂಜೆ ಮಂಗೇಶರಾಯರು
- ದೇವರು ಧನ, ಅಧಿಕಾರ ಕೊಡೋದು ಜನರಿಗೆ ಉಪಕಾರ ಮಾಡಲಿ ಅಂತ. ಆದರೆ, ಮನುಷ್ಯ ಅದನ್ನು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.
  —ತ.ರಾ.ಸು.
- ಅನುಭವವು ಸವಿಯಲ್ಲ; ಅದರ ನೆನಪೇ ಸವಿಯು/ ಅದ ಕದ್ದು ಮೇಯದೆ ಮನವು!
  —ಕಡೆಂಗೋಡ್ಲು ಶಂಕರಭಟ್ಟ
- ಪುಸ್ತಕಗಳಲ್ಲಿ ಹಳೆಯವೆಂಬುವೇ ಇಲ್ಲ. ಓದಿರದ ಪುಸ್ತಕಗಳೆಲ್ಲ ಹೊಸವು; ಮತ್ತೆ ಮತ್ತೆ ಓದಬೇಕೆನ್ನುವ ಪುಸ್ತಕಗಳೆಲ್ಲ ಹೊಸವು.
  —ಹಾ.ಮಾ. ನಾಯಕ
- ದೇವಸ್ಥಾನಗಳಿಗಿಂತ ಗ್ರಂಥಾಲಯಗಳು ಮಹತ್ವವೆಂದು ನಮ್ಮ ಜನರಿಗೆ ಅನ್ನಿಸುವುದು ಯಾವಾಗ?
  —ಜಿ.ಎಸ್. ಶಿವರುದ್ರಪ್ಪ